ದಿನಾಂಕಃ 23/09/2023 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು.

ಪಾಟೀ ಸವಾಲುಃ ಪ್ರತಿವಾದ ಪರ ವಕೀಲರಾದ ಶ್ರೀ ಎನ್.ವಿ. ವಕೀಲರಿಂದಃ

ಪ್ರತಿವಾದಿಗಳು ನಮ್ಮ ಜಮೀನಿನ ಯಾವ ಭಾಗದಲ್ಲೂ ಜಮೀನು ಹೊಂದಿರುವುದಿಲ್ಲ. ಪ್ರತಿವಾದಿ 1 ಮತ್ತು 2 ರವರು ಮಲ್ಲಯ್ಯನ ಮಕ್ಕಳಾಗಿರುತ್ತಾರೆ. ಮಲ್ಲಯ್ಯರವರ ತಂದೆ ಹೆಸರು ನನಗೆ ಗೊತ್ತಿಲ್ಲ. ಅವರು ಸಂಕನಹಳ್ಳಿ ಗ್ರಾಮದವರು. ನಾನು ಈ ದಾವೆಯನ್ನು ಸರ್ವೆ ನಂಬರ್ 270/1, 270/2 ಮತ್ತು 270/5 ಕ್ಕೆ ಸಲ್ಲಿಸಿರುತ್ತೇನೆ ಬೇರೆ ಸರ್ವೆ ನಂಬರ್ ಗೆ ದಾವೆಯನ್ನು ಸಲ್ಲಿಸಿರುವುದಿಲ್ಲ. ಸಾಕ್ಷಿಯು ಮುಂದುವರೆದು ನಾನು ಸರ್ವೆ ನಂಬರ್ 270/1, 270/2, 270/4, 270/5, 270/7 ಕ್ಕೆ ಸಂಬಂಧಿಸಿದಂತೆ ದಾವೆಯನ್ನು ಸಲ್ಲಿಸಿರುತ್ತೇನೆ ಎಂದು ನುಡಿಯುತ್ತಾರೆ. ನಾನು ಎಸ್.ಎಸ್.ಎಲ್.ಸಿ.ಯವರೆಗೆ ವಿದ್ಯಾಭ್ಯಾಸ ಮಾಡಿರುತ್ತೇನೆ. ನಾನು ಪ್ರಸ್ತುತ ವ್ಯವಸಾಯವನ್ನು ಮಾಡಿರುತ್ತೇನೆ.

ದಾವಾ ಆಸ್ತಿಗಳು ನನ್ನ ತಂದೆ ಹಾಗೂ ನನ್ನ ಚಿಕ್ಕಪ್ಪ ಒಟ್ಟಿಗೆ ಕ್ರಯಕ್ಕೆ ತೆಗೆದುಕೊಂಡಿರುವ ಆಸ್ತಿ ಆಗಿರುತ್ತದೆ. 1986 ರಲ್ಲಿ ರಾಚಯ್ಯನ ಮಗ ಮಲ್ಲೇಶ ಎಂಬುವವರಿಂದ ಕೊಂಡುಕೊಂಡಿರುತ್ತಾರೆ. ಸದರಿ ರಾಚಯ್ಯನ ಮಗ ಮಲ್ಲೇಶನಿಗೆ ಆಸ್ತಿಯು ಹೇಗೆ ಬಂದಿದೆ, ಮತ್ತು ಯಾವ ಜನಾಂಗಕ್ಕೆ ಸೇರಿದ್ದಾರೆ ಎಂದು ನನಗೆ ಗೊತ್ತಿಲ್ಲ. ನನ್ನ ತಂದೆಯು ಸರ್ವೆ ನಂಬರ್ 270 ರಲ್ಲಿ 3 ಎಕರೆ 7 ಗುಂಟೆ ಖರಾಬು ಕಳೆದು 3 ಎಕರೆ 5 ಗುಂಟೆ ತೆಗೆದುಕೊಂಡಿರುತ್ತಾರೆ. ನಮಗೆ ಮತ್ತು ಪ್ರತಿವಾದಿಗಳಿಗೆ ತಹಶೀಲ್ದಾರು ನ್ಯಾಯಾಲಯದಲ್ಲಿ ವಿಚಾರಣೆ ನಡೆದಿರುವ ಬಗ್ಗೆ ನನಗೆ ಗೊತ್ತಿಲ್ಲ.

ನನ್ನ ತಂದೆ ಸರ್ವೆ ನಂಬರ್ 270 ರಲ್ಲಿ 3 ಎಕರೆ 7 ಗುಂಟೆ ಜಮೀನನ್ನು ಕ್ರಯಕ್ಕೆ ತೆಗೆದುಕೊಂಡಿಲ್ಲ ಎಂದರೆ ಸರಿಯಲ್ಲ. ನಾವು ಬರೆಸಿಕೊಂಡ ಜಮೀನು ರಾಚಯ್ಯ ಮತ್ತು ಮಲ್ಲೇಶನಿಗೆ ಸರ್ಕಾರದಿಂದ ಮಂಜೂರಾಗಿರುವ ಜಮೀನು ಎಂದರೆ ಗೊತ್ತಿಲ್ಲ. ನಾನು ದಾವೆಯಲ್ಲಿ ಬರೆಸಿರುವ ಎಲ್ಲಾ ಅಂಶಗಳು ಸುಳ್ಳಿನಿಂದ ಕೂಡಿರುತ್ತದೆ ಎಂದರೆ ಸರಿಯಲ್ಲ. ನಾನು ಹಲವಾರು ಅಂಶಗಳು ಮತ್ತು ಮೂಲ ಸರ್ವೆ ನಂಬರ್ ಅನ್ನು ಮರೆಮಾಚಿ ಸುಳ್ಳು ದಾವೆಯನ್ನು ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಮಲ್ಲಯ್ಯನ ಕುಟುಂಬದವರು ಎಷ್ಟು ಜಮೀನನ್ನು ವ್ಯವಸಾಯ ಮಾಡತ್ತಿರುವ ಬಗ್ಗೆ ತಿಳಿದುಕೊಂಡಿದ್ದಿರಾ ಎಂದರೆ ಸಾಕ್ಷಿ ಅವರು ಯಾವುದೇ ಜಮೀನನ್ನು ವ್ಯವಸಾಯ ಮಾಡುತ್ತಿಲ್ಲ, ನಾವೇ ಸಂಪೂರ್ಣವಾಗಿ ವ್ಯವಸಾಯ ಮಾಡಿಕೊಂಡು ಬರುತ್ತಿದ್ದೇವೆ ಎಂದು ನುಡಿಯುತ್ತಾರೆ.

1986 ರಲ್ಲಿ ನನ್ನ ತಂದೆ ಮತ್ತು ನನ್ನ ಚಿಕ್ಕಪ್ಪ ದಾವಾ ಆಸ್ತಿಯನ್ನು ಕ್ರಯಕ್ಕೆ ಪಡೆದುಕೊಂಡು ಅಲ್ಲಿನಿಂದ ಇಲ್ಲಿಯವರೆಗೆ ದಾವಾ ಆಸ್ತಿಯ ಖಾತೆ, ವಗೈರೆಗಳು ನಮ್ಮ ಹೆಸರಿಗೆ ಬರುತ್ತಿದ್ದಾವೆ. ರಾಚಯ್ಯ ಮತ್ತು ಮಲ್ಲೇಶನ ಹೆಸರಿಗೆ ಎಷ್ಟು ವಿಸ್ತೀರ್ಣದ ಜಮೀನು ಯಾವ ಸರ್ವೆ ನಂಬರ್ ನಲ್ಲಿ ಇರುತ್ತದೆ

ಎಂದು ನಾನು ತಿಳಿದುಕೊಂಡಿಲ್ಲ. ನಾವು 1986 ರಲ್ಲಿ ದಾವಾ ಆಸ್ತಿಯನ್ನು ತೆಗೆದುಕೊಂಡಾಗಾ ಸರ್ವೆ ನಂಬರ್ 270 ಆಗಿತ್ತು. ಸರ್ವೆ ನಂಬರ್ 128 ಜಮೀನು ಯಾರಿಗೆ ಸೇರಿದೆ ಎಂದು ನನಗೆ ಗೊತ್ತಿಲ್ಲ. ಸರ್ವೆ ನಂಬರ್ 128 ಮತ್ತು ನಮ್ಮ ಕುಟುಂಬಕ್ಕೆ ಯಾವುದೇ ಸಂಬಂಧವಿರುವುದಿಲ್ಲ. ಸರ್ವೆ ನಂಬರ್ 128 ಮತ್ತು ಸರ್ವೆ ನಂಬರ್ 270 ಕ್ಕೆ ಸಂಬಂಧಿಸಿದಂತೆ ತಹಶೀಲ್ದಾರು ಕಚೇರಿಯಲ್ಲಿ ಆದೇಶವಾಗಿರುವ ಬಗ್ಗೆ ನಾನು ತಿಳಿದುಕೊಂಡಿಲ್ಲ.

ನಿಪಿ.11 ಕ್ಕೆ ಸಂಬಂಧಿಸಿದಂತೆ ನಾನು ಸರ್ವೆ ನಂಬರ್ 270 ಕ್ಕೆಸಂಬಂಧಿಸಿದಂತೆ ಯಾವುದೇ ಕ್ರಯಪತ್ರವನ್ನು ಬರೆಸಿಕೊಂಡಿಲ್ಲ ಎಂದರೆ ಸರಿಯಲ್ಲ . ನಿಪಿ.11 ರ ಪ್ರಕಾರ ಕೇವಲ ಸರ್ವೆ ನಂಬರ್ 128 ಕ್ಕೆ ಮಾತ್ರ ಸಂಬಂಧಿಸಿದೆ ಎಂದರೆ ಸರಿಯಲ್ಲ . ಸರ್ವೆ ನಂಬರ್ 270 ಕ್ಕೆ ಸಂಬಂಧಿಸಿದಂತೆ ದಿನಾಂಕಃ 01.04.1986 ರಿಂದ ಯಾವುದೇ ಕ್ರಯವಾಗಿಲ್ಲ ಎಂದು ನಮೂದು ಇರುತ್ತದೆ ಎಂದರೆ ನನಗೆ ಗೊತ್ತಿಲ್ಲ . ನಿಪಿ.6 ರ ಪ್ರಕಾರ ಕಾಲಂ ನಂಬರ್ 11 ರಲ್ಲಿ 128 ರಿಂದ ಹೊಸ ಸರ್ವೆ ನಂಬರ್ ಆಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ನಾವು ಸರ್ವೆ ನಂಬರ್ 270 ರಲ್ಲಿ ಯಾವುದೇ ಆಸ್ತಿಯನ್ನು ಕ್ರಯಕ್ಕೆ ತೆಗೆದುಕೊಂಡಿಲ್ಲ ಮತ್ತು ಯಾವುದೇ ಕ್ರಯಪತ್ರವನ್ನು ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ . ನಿಪಿ.19 ರಲ್ಲಿ ಕೇವಲ ಸರ್ವೆ ನಂಬರ್ 128 ಕ್ಕೆ ಮಾತ್ರ ಉಲ್ಲೇಖ ಇರುತ್ತದೆ ಅಲ್ಲಿ ಸರ್ವೆ ನಂಬರ್ 270 ಕ್ಕೆ ಯಾವುದೇ ಉಲ್ಲೇಖ ಇಲ್ಲ ಎಂದರೆ ಗೊತ್ತಿಲ್ಲ.

ನಮ್ಮ ಮತ್ತು ಪ್ರತಿವಾದಿ ಹಾಗೂ ಇತರರ ಕುಟುಂಬಗಳಿಗೆ ಸಂಬಂಧಿಸಿದಂತೆ ತಹಶೀಲ್ದಾರವರ ನ್ಯಾಯಾಲಯದಲ್ಲಿ ಕೆಲವು ಆದೇಶವಾಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಅದರೆ ಎಲ್.ಎ.ಡಿ. ಸಂ. 242/1991-92 ಆಗಿರುತ್ತದೆ ಎಂದರೆ ಗೊತ್ತಿಲ್ಲ. ಕೆ.ಎಸ್. ಮೋಹನ್ ಕುಮಾರ್ ರವರು ನಮ್ಮ ಪಕ್ಕದ ಜಮೀನಿನವರು, ಅವರು ಹೊಳೆನರಸೀಪುರದಲ್ಲಿ ವಾಸವಾಗಿರುತ್ತಾರೆ. ಅವರು ಬೇರೇಯವರ ಜಮೀನು ಖರೀದಿ ಮಾಡಿರುವ ಬಗ್ಗೆ ನನಗೆ ಗೊತ್ತಿಲ್ಲ. ಅವರು ಪ್ರಸ್ತುತ ಎಷ್ಟನೇ ಸರ್ವೆ ನಂಬರ್ ನಲ್ಲಿ, ಎಷ್ಟು ಎಕರೆಯಲ್ಲಿ ಸ್ವಾಧೀನ ಇರುವ ಬಗ್ಗೆ ನನಗೆ ಗೊತ್ತಿಲ್ಲ. ಅವರು ಸರ್ವೆ ನಂಬರ್ 128 ರಲ್ಲಿ 2 ಎಕರೆ 6 ಗುಂಟೆ ಜಮೀನಿನಲ್ಲಿ ಸ್ವಾಧೀನ ಇರುವ ಬಗ್ಗೆ ನನಗೆ ಗೊತ್ತಿಲ್ಲ. ನಾನು ಕ್ರಯಕ್ಕೆ ತೆಗೆದುಕೊಂಡಿರುವ ಸರ್ವೆ ನಂಬರ್ 128 ಕ್ಕೆ ಸಂಬಂಧಿಸಿದಂತೆ ಮಾನ್ಯ ತಹಶೀಲ್ದಾರವರ ಆದೇಶದಂತೆ ಸದರಿ ಕೆ.ಎಸ್. ಮೋಹನ್ ಕುಮಾರ್ ರವರು ಸ್ವಾದಿನಾನುಭವಕ್ಕೆ ಇರುತ್ತಾರೆ ಎಂದರೆ ಗೊತ್ತಿಲ್ಲ. ಸರ್ವೆ ನಂಬರ್ 270 ಮತ್ತು 128 ಅಕ್ಕಪಕ್ಕ ಇರುವ ಬಗ್ಗೆ ನನಗೆ ಗೊತ್ತಿಲ್ಲ, ಆದರೆ ಸರ್ವೆ ನಂಬರ್ 270 ರಲ್ಲಿ ನಾವು ಸ್ವಾಧೀನದಲ್ಲಿ ಇರುತ್ತೇವೆ ಎಂದು ನುಡಿಯುತ್ತಾರೆ. ಮೋಹನ್ ಕುಮಾರ್ ರವರು ಸೈಯದ್ ಸಲೀಂ ಖಾನ್ ರವರಿಂದ ಜಮೀನು ಕೊಂಡುಕೊಂಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ.

ಸರ್ವೆ ನಂಬರ್ 128 ಮತ್ತು 270 ರ ಸ್ವಾಧೀನ ಅನುಭೋಗ ವ್ಯತ್ಯಾಸ ಇರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಮಲ್ಲಯ್ಯನ ತಂದೆ ಹೆಸರು ಚೆನ್ನವೀರಯ್ಯ ಎಂದರೆ ನನಗೆ ಗೊತ್ತಿಲ್ಲ. ಅವರು ಮಂಜೂರಾತಿಗಾಗಿ ಅರ್ಜಿಯನ್ನು ಸಲ್ಲಿಸಿದ ಬಗ್ಗೆ ನನಗೆ ಗೊತ್ತಿಲ್ಲ. 1 ಮತ್ತು 2 ನೇ ಪ್ರತಿವಾದಿ ಮತ್ತು ಅವರ ತಂದೆ 168 ರಲ್ಲಿ 29 ಗುಂಟೆ, 169 ರಲ್ಲಿ 29 ಗುಂಟೆ, ದಾವಾ ಸರ್ವೆ ನಂಬರ್ 270 ರಲ್ಲಿ 28 ಗುಂಟೆ

ಸ್ವಾಧೀನಾನುಭವದಲ್ಲಿ ಇರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಮಾನ್ಯ ತಹಶೀಲ್ದಾರವರ ನ್ಯಾಯಾಲಯದಲ್ಲಿ ಆದೇಶವಾಗಿರುತ್ತದೆ ಎಂದರೆ ಸರಿಯಲ್ಲ. ಜಯಮ್ಮ, ನನ್ನ ಚಿಕ್ಕಪ್ಪ ಅಣ್ಣೇಗೌಡ, ನನ್ನ ತಂದೆ ದ್ಯಾವೇಗೌಡ ರವರು ಮಾನ್ಯ ತಹಶೀಲ್ದಾರವರ ಮುಂದೆ ಲಿಖಿತ ಹೇಳಿಕೆ ನೀಡಿರುತ್ತಾರೆ ಎಂದರೆ ಸರಿಯಲ್ಲ. ಪ್ರತಿವಾದಿಗಳು ಸಲ್ಲಿಸಿರುವ ತಕರಾರಿನ ಬಗ್ಗೆ ನಾನು ತಿಳಿದುಕೊಂಡಿರುವುದಿಲ್ಲ. ಅವರು ತಮ್ಮ ಲಿಖಿತ ಹೇಳಿಕೆಯ ಪ್ಯಾರ 6 ರಲ್ಲಿ ಸಂಪೂರ್ಣ ವಿವರದೊಂದಿಗೆ ಸಲ್ಲಸಿರುತ್ತಾರೆ ಎಂದರೆ ಗೊತ್ತಿಲ್ಲ. ಮಲ್ಲಯ್ಯ ಮತ್ತು ಅವರ ತಾಯಿಯಾದ ಕಾಳಮ್ಮರವರು ಗೊತ್ತಿಲ್ಲ.

ಪ್ರತಿವಾದಿಗಳು ಸರ್ವೆ ನಂಬರ್ 128 ಮತ್ತು ದಾವಾ ಆಸ್ತಿ 270 ರಲ್ಲಿ ಸ್ವಾಧೀನಾ ಅನುಭೋಗ ಹೊಂದಿರುತ್ತಾರೆ ಎಂದರೆ ಸರಿಯಲ್ಲ. ನಮ್ಮ ಕ್ರಯಪತ್ರದಲ್ಲಿ ಏನು ಚೆಕ್ಕುಬಂಧಿ ಹಾಕಿರುತ್ತಾರೆ ಎಂದರೆ ಸಾಕ್ಷಿ ಒಂದೇ ಚೆಕ್ಕುಬಂಧಿ ಹಾಕಿರುತ್ತಾರೆ ಎಂದು ನುಡಿಯುತ್ತಾರೆ. ಕ್ರಯಪತ್ರದಲ್ಲಿ ಬರೆದಿರುವಂತೆ ಪೂರ್ವಕ್ಕೆ ಸಣ್ಣಕಾಳ ಭೈರವ ಎಂದು ಇರುತ್ತದೆ. ಪೂರ್ವಕ್ಕೆ ಚೆನ್ನವೀರನಾಯಕ ಎಂದು ಬರೆದಿರುತ್ತದೆ ಎಂದರೆ ಸರಿಯಲ್ಲ.

(ಮುಂದುವರೆದ ಪಾಟೀ ಸವಾಲಿಗೆ ಸಮಯ ನೀಡಿ ಮುಂದೂಡಲಾಯಿತು.)

(ಬಹಿರಂಗ ನ್ಯಾಯಾಲಯದಲ್ಲಿ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ.ಸ.ಇ.

ಅಪರ ಸಿವಿಲ್ ಜಡ್ಜ್ ಮತ್ತು ಜೆಎಂಎಫ್.ಸಿ
ಹೊಳೆನರಸೀಪುರ